ದಿನಾಂಕಃ 17-03-2026 ರಂದು **ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ಆರೋಪಿ ಪರ ಶ್ರೀ. ಕೆ. ಜಿ. ಎಂ. ವಕೀಲರಿಂದ

1. ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಆ ನಂತರ ನಾನು ವ್ಯವಸಾಯ ಮಾಡುತ್ತಿದ್ದೆನು. ನಂತರ 2013 ನೇ ಇಸವಿಯಲ್ಲಿ ನಾಗಮಂಗಲದ ಮೂತ್ತೂಟ್ ಫೈನಾನ್ಸ್ ನಲ್ಲಿ ನನಗೆ ಅಟೆಂಡರ್ ಕೆಲಸ ಸಿಕ್ಕಿದ್ದು ಈಗಲೂ ಸಹ ನಾನು ಅಲ್ಲಿ ಕೆಲಸ ಮಾಡುತ್ತಿದ್ದೇನೆ. ನನ್ನ ತಿಂಗಳ ಸಂಬಳವನ್ನು ಸದರಿ ಕಂಪನಿಯವರು ನನ್ನ ಬ್ಯಾಂಕಿನ ಖಾತೆಗೆ ಜಮಾ ಮಾಡುತ್ತಾರೆ. 2013 ನೇ ಇಸವಿಯಲ್ಲಿ ನಾನು 5,000/- ರೂಪಾಯಿಗಳ ಸಂಬಳ ಪಡೆಯುತ್ತಿದ್ದೆನು. ನಾನು ನಾಗಮಂಗಲದ ಆಕ್ಸಿಸ್ ಬ್ಯಾಂಕಿನಲ್ಲಿ ಖಾತೆಯನ್ನು ಹೊಂದಿರುತ್ತೇನೆ. ಸದರಿ ಖಾತೆಯನ್ನು ಮುತ್ತೂಟ್ ಫೈನಾನ್ಸ್ ಕಂಪನಿಯವರು ಮಾಡಿಸಿ ಕೊಟ್ಟಿರುತ್ತಾರೆ. ಸದರಿ ಖಾತೆಯನ್ನು ಹೊರತು ಪಡಿಸಿ ನಾನು ನಾಗಮಂಗಲದ ಎಸ್. ಬಿ. ಐ. ನಲ್ಲಿ ಸಹ ನನ್ನ ವೈಯಕ್ತಿಕ ಖಾತೆಯನ್ನು ಹೊಂದಿರುತ್ತೇನೆ. ಸದರಿ ಖಾತೆಯನ್ನು ನಾನು 2010 ನೇ ಇಸವಿಯಿಂದ ಹೊಂದಿರುತ್ತೇನೆ. ಸದರಿ ಖಾತೆಯಲ್ಲಿ ನಾನು ವರ್ಷಕ್ಕೆ 50,000/- ರೂಪಾಯಿಗಳಿಂದ 1 ಲಕ್ಷ ರೂಪಾಯಿಗಳ ವರೆಗೆ ವ್ಯವಹಾರ ಮಾಡಿರುತ್ತೇನೆ. ನಾನು ಆದಾಯ ತೆರಿಗೆ ಪಾವತಿದಾರನಲ್ಲ. 2023 ನೇ ಇಸವಿಯಲ್ಲಿ ನಾನು 17,000/- ರೂಪಾಯಿಗಳ ಸಂಬಳ ಪಡೆಯುತ್ತಿದ್ದೆನು. ನನಗೆ ತಿಂಗಳಿಗೆ ಸುಮಾರು 5,000/- ರೂಪಾಯಿಗಳ ಖರ್ಚು ಇರುತ್ತದೆ. ಆಕ್ಸಿಸ್ ಬ್ಯಾಂಕ್ ಹಾಗೂ ಎಸ್. ಬಿ. ಐ. ಬ್ಯಾಂಕಿನ ನನ್ನ ಬ್ಯಾಂಕ್ ಖಾತಾ ನಕಲುಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಬಹುದು.

2. ಆರೋಪಿ ನನಗೆ 2018 – 19 ನೇ ಇಸವಿಯಿಂದ ಪರಿಚಯ ಇರುತ್ತಾರೆ. ಆರೋಪಿ ಮೊದಲು ಮೇಲುಕೋಟೆಯ ಸರ್ಕಾರಿ ಕಾಲೇಜಿನಲ್ಲಿ ಪ್ರೊಫೆಸರ್ ಆಗಿದ್ದರು. ಈಗ ಅವರು ಕೆ. ಆರ್. ಪೇಟೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ನಾನು ಆರೋಪಿಗೆ 5 ಲಕ್ಷ ರೂಪಾಯಿ ನೀಡಿದ ಸಮಯದಲ್ಲಿ ಅವರು ಮೇಲುಕೋಟೆಯಲ್ಲಿ ಕೆಲಸ ಮಾಡುತ್ತಿದ್ದರು. ಆರೋಪಿ ಮೂಲತಃ ನಾಗಮಂಗಲ

ತಾಲ್ಲೂಕಿನ ಅರಹಳ್ಳಿ ಗ್ರಾಮದವರು ಇರುತ್ತಾರೆ. ಆರೋಪಿ ನಾಗಮಂಗಲದ ಟಿ. ಬಿ. ಬಡಾವಣೆಯ ಗುರುಕುಲ ವಿದ್ಯಾಸಂಸ್ಥೆಯ ಬಳಿ ಕೆ. ಇ. ಬಿ. ಕಛೇರಿಯ ಎದುರು ವಾಸ ಮಾಡಿಕೊಂಡಿರುತ್ತಾರೆ.

3. ನಾನು ನನ್ನ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದಾಗ ಆರೋಪಿ ನನ್ನ ಕಛೇರಿಗೆ ಬಂದು ಹಣವನ್ನು ಕೇಳಿದ್ದರು. ಆರೋಪಿಗೆ ನೀಡಿದ 5 ಲಕ್ಷ ರೂಪಾಯಿಗಳ ಪೈಕಿ ನನ್ನ ಸಂಬಳದಿಂದ ಉಳಿತಾಯ ಮಾಡಿದ ಹಣ, ನಮ್ಮ ಕುಟುಂಬದ ಕುರಿಗಳನ್ನು ಹಾಗೂ ಕೊಬ್ಬರಿಯನ್ನು ಮಾರಿದ ಹಣ ನನ್ನ ಬಳಿ ಇದ್ದು ಅದನ್ನು ನಾನು ಆರೋಪಿಗೆ ನೀಡಿದ್ದೆನು. ನಾನು ನನ್ನ ಎಸ್. ಬಿ. ಐ. ಬ್ಯಾಂಕಿನ ಖಾತೆಯಿಂದ 2 ಲಕ್ಷ ರೂಪಾಯಿಗಳನ್ನು ನಗದೀಕರಿಸಿಕೊಂಡಿದ್ದೆನು. ಸದರಿ 2 ಲಕ್ಷ ರೂಪಾಯಿಗಳನ್ನು ಚೆಕ್ಕು ಮೂಲಕ ನೀಡಲು ತೊಂದರೆ ಇತ್ತೇ ಎಂಬ ಪ್ರಶ್ನೆಗೆ ಸಾಕ್ಷಿ ಆರೋಪಿ ನಗದು ರೂಪದಲ್ಲಿ ಹಣ ಬೇಕು ಎಂದು ಕೇಳಿದ್ದ ಕಾರಣ ನಾನು ಅವರಿಗೆ ನಗದು ರೂಪದಲ್ಲಿ ಹಣ ನೀಡಿದ್ದೆನು ಎಂದು ನುಡಿಯುತ್ತಾರೆ. ನಾನು ಕಲೀಮ್ ಎಂಬ ಕೊಬ್ಬರಿ ವ್ಯಾಪಾರಿಗೆ ಕೊಬ್ಬರಿಯನ್ನು ನೀಡಿದ್ದೆನು. ನಾನು ಅವರಿಗೆ ನೀಡಿದ ಕೊಬ್ಬರಿಯ ಬಾಬ್ತು ಅವರು ನನಗೆ ನಗದು ರೂಪದಲ್ಲಿ ಹಣ ಸಂದಾಯ ಮಾಡಿದ್ದರು. ನಾನು ಕೊಬ್ಬರಿ ಮಾರಾಟ ಮಾಡಿದಾಗ ಅದಕ್ಕೆ ಸಂಬಂಧಿಸಿದಂತೆ ಕಲೀಮ್ ರವರು ನನಗೆ ಚೀಟಿಯನ್ನು ನೀಡಿರುತ್ತಾರೆ ಎಂದರೆ ಸರಿ. ಕಲೀಮ್ ರವರು ಸಹ ತಮ್ಮ ವ್ಯವಹಾರಕ್ಕೆ ಸಂಬಂಧಿಸಿದಂತೆ ಪುಸ್ತಕವನ್ನು ನಿರ್ವಹಣೆ ಮಾಡಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ನಾನು ಕಲೀಮ್ ರವರಿಗೆ ಯಾವುದೇ ಕೊಬ್ಬರಿ ಮಾರಾಟ ಮಾಡಿರುವುದಿಲ್ಲ ಆ ಕಾರಣಕ್ಕೆ ನನ್ನ ಬಳಿ ಅದಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಕಲೀಮ್ ರವರು ನನಗೆ ಚೀಟಿ ಬರೆದುಕೊಟ್ಟಿದ್ದು ಅವರು ನನಗೆ ನಗದು ರೂಪದಲ್ಲಿ ಹಣ ಪಾವತಿ ಮಾಡಿದ ಕಾರಣ ಸದರಿ ಚೀಟಿಯನ್ನು ನಾನು ಹರಿದು ಹಾಕಿದ್ದೆನು ಎಂದು ನುಡಿಯುತ್ತಾರೆ.

4. ಕಲೀಮ್ ರವರಿಗೆ ನಾನು 1,50,000/- ರೂಪಾಯಿ ಬೆಲೆ ಬಾಳುವ ಕೊಬ್ಬರಿಯನ್ನು ಮಾರಾಟ ಮಾಡಿದ್ದೆನು. ನಾನು ಬೆಟ್ಟದಮಲ್ಲೇನಹಳ್ಳಿ ಹಲಗಪ್ಪನವರಿಗೆ ನನಗೆ ಸೇರಿದ 25 ಕುರಿಗಳನ್ನು ಮಾರಾಟ ಮಾಡಿದ್ದೆನು. ನನಗೆ

ಒಬ್ಬ ಅಣ್ಣ ಹಾಗೂ ಒಬ್ಬ ಅಕ್ಕ ಇರುತ್ತಾರೆ. ನಮಗೆ ಸೇರಿದ ಕುರಿಗಳನ್ನು ನನ್ನ ತಂದೆ ನೋಡಿಕೊಳ್ಳುತ್ತಿದ್ದರು. ಸಾಕ್ಷಿ ಮುಂದುವರೆದು ರಜಾ ದಿನಗಳಲ್ಲಿ ನಾನು ಸಹ ನೋಡಿಕೊಳ್ಳುತ್ತಿದ್ದೆನು ಎಂದು ನುಡಿಯುತ್ತಾರೆ.

5. ಈ ಪ್ರಕರಣಕ್ಕೆ ಸಂಬಂಧಿಸಿದ ವ್ಯವಹಾರವನ್ನು ಹೊರತು ಪಡಿಸಿ ನನ್ನ ಹಾಗೂ ಆರೋಪಿಯ ನಡುವೆ ಮೊದಲು ಬೇರೆ ಯಾವುದೇ ವ್ಯವಹಾರ ಇರಲಿಲ್ಲ. 5 ಲಕ್ಷ ರೂಪಾಯಿಗಳು ದೊಡ್ಡ ಮೊತ್ತ ಎಂದರೆ ಸರಿ. ಆರೋಪಿ ಪ್ರೊಫೆಸರ್ ಆಗಿದ್ದು ಹಣ ವಾಪಸ್ಸು ನೀಡುತ್ತಾರೆ ಎಂಬ ನಂಬಿಕೆಯ ಮೇಲೆ ನಾನು ಅವರಿಗೆ ಹಣವನ್ನು ನೀಡಿದ್ದೆನು. ಆರೋಪಿಗೆ ಹಣವನ್ನು ನೀಡಿದ್ದನ್ನು ಹೊರತು ಪಡಿಸಿ ನಾನು ಬೇರೆ ಯಾರಿಗೂ ಸಹ ಹಣ ನೀಡಿರುವುದಿಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ಸಮಯ ಕೋರಿರುತ್ತಾರೆ ಸಮಯ ನೀಡಲಾಯಿತು)

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು )

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ನಾಗಮಂಗಲ.